**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**
CC No.863/2019

CW -1 PW - 1

| | | |
|---|---|---|
| ಹೆಸರು | ಃ | ಬಸವಣ್ಣ |
| ತಂದೆಯ ಹೆಸರು | ಃ | ದೊಣಪ್ಪ |
| ವಯಸ್ಸು | ಃ | 60 ವರ್ಷ |
| ಉದ್ಯೋಗ | ಃ | ನಿವೃತ್ತ ರೆವಿನ್ಯೂ ಇನ್ಸಪೆಕ್ಟರ್ |
| ವಾಸ | ಃ | ಹಾರೋಹಳ್ಳಿ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 11-10-2023

ನಾನು 2015 ರಿಂದ 2018 ರವರೆಗೆ ರಾಜಸ್ವ ನಿರೀಕ್ಷಕರಾಗಿ ಸಾತನೂರು ಹೋಬಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನು.

ದಿಃ02.06.2017 ರಂದು ತಹಶೀಲ್ದಾರ್ ರವರಿಗೆ ಒಬ್ಬರು ಸಲ್ಲಿಸಿದ ಅರ್ಜಿಯ ಮೇರೆಗೆ ನನಗೆ ಪರಿಶೀಲನೆಗೆ ಸೂಚನೆಯನ್ನು ನೀಡಿದರು. ಮೇಲಾಧಿಕಾರಿಗಳ ಸೂಚನೆಯ ಮೇರೆಗೆ ದಿಃ04.06.2017 ರಂದು ಕಂಚನಹಳ್ಳಿ ಗ್ರಾಮಕ್ಕೆ ಹೋಗುವ ದಾರಿಯಲ್ಲಿ ರಾಜೀವ್ ಗಾಂಧಿ ನಗರದ ಪಕ್ಕದಲ್ಲಿರುವ ಹಳ್ಳದಲ್ಲಿ ಮರಳನ್ನು ತೆಗೆದು ಪಕ್ಕದ ಜಾಗದಲ್ಲಿ ರಾಶಿ ಹಾಕಿರುವುದು ಕಂಡು ಬಂತು. ನಾನು ಮಹಜರ್ ಗೆ ಹೋದಾಗ ಅಲ್ಲಿ ಯಾವುದೇ ಗ್ರಾಮಸ್ಥರು ಇರಲಿಲ್ಲ. ಆಗ ನಾನು ಮತ್ತು ಚಾಸಾ-3 ರವರು ಮಹಜರ್ ಮಾಡಿ ದೂರಿನಲ್ಲಿ ನಮೂದು ಮಾಡಲಾಗಿದ್ದ ವ್ಯಕ್ತಿಗಳ ವಿರುದ್ಧ ಅದೇ ದಿನ ದೂರು ಸಲ್ಲಿಸಿದ್ದೇನು.

ನಂತರ ದಿಃ05.06.2017 ರಂದು ಸಾತನೂರು ಠಾಣೆಯಿಂದ ನನ್ನ ಸಮಕ್ಷಮ ಅದೇ ಸ್ಥಳದಲ್ಲಿ ಪುನಃ ಮಹಜರ್ ಕ್ರಮ ಜರುಗಿಸಿದರು. ಸದರಿ ಮರಳನ್ನು ಟ್ರಾಕ್ಟರ್ ಮುಖಾಂತರ ಸಾತನೂರು ಠಾಣೆಗೆ ಸಾಗಿಸಲಾಯಿತು. ನಂತರ ಸಾತನೂರು ಠಾಣೆಯಲ್ಲಿ ಕ್ರಮ ಕೈಗೊಂಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ದೂರು ಆಗಿದ್ದು ಸಾಕ್ಷಿ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ

ಗುರುತಿಸಿದ್ದು, ದೂರನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ಸಾಕ್ಷಿ ತಾವು ಮಾಡಿದ ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸಾತನೂರು ಠಾಣೆಯವರು ಮಾಡಿದ ಅಮಾನತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ06.06.2017 ರಂದು ಮಾಡಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪೋಟೋಗಳನ್ನು ನೋಡಿ ಗುರುತಿಸಿದ್ದು, ಪೊಟೋಗಳನ್ನು ನಿಪಿ-5 ರಿಂದ 8 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಗುರುತಿಸಲು ಸಾಧ್ಯವಿರುವುದಿಲ್ಲ ಎಂದುನುಡಿಯುತ್ತಾರೆ.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ಎಸ್ ಡಿ ವಕೀಲರಿಂದಃ</u>**

ನಾನು ತಹಶೀಲ್ದಾರ್ ರವರ ಆದೇಶದ ಮೇರೆಗೆ ವರದಿಯನ್ನು ನೀಡಿರುತ್ತೇನೆಂದರೆ ಸರಿ. ನಾನು ಪಿರ್ಯಾದಿ ನೀಡುವ ಮೊದಲು ಸ್ಥಳ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ತಹಶೀಲ್ದಾರ್ ರವರಿಗೆ ಅರ್ಜಿ ಸಲ್ಲಿಸಿದ್ದ ರವಿಕುಮಾರ್ ಆರ್ ಟಿ ಐ ಕಾರ್ಯಕರ್ತ ಎಂದರೆ ಸರಿ. ನಾನು ಕೆಲವು ವರ್ಷ ಅಲ್ಲಿ ಕೆಲಸ ಮಾಡಿರುವ ಕಾರಣ ನನಗೆ ಜನ ಪರಿಚಯವಿದೆ ಎಂದರೆ ಸರಿ. ಕಂಚನಹಳ್ಳಿ ರವಿಕುಮಾರ್ ಗೂ ಹಾಗೂ ಆರೋಪಿತರಿಗೂ ವೈಮನಸ್ಸು ಇದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ತಹಶೀಲ್ದಾರ್ ರವರಿಗೆ ವರದಿ ನೀಡುವ ಮುಂಚೆ ನಾನು ಸ್ಥಳ ಪರಿಶೀಲನೆ ಮಾಡಿಲ್ಲ ಎಂದರೆ ಸರಿ. ಕಂಚನಹಳ್ಳಿ ಗ್ರಾಮದ ಎಲ್ಲಾ ಸರ್ವೆ ನಂಬರ್ ಗಳು ನನ್ನ ಹದ್ದುಬಸ್ಸಿನಲ್ಲಿದ್ದವು ಎಂದರೆ ಸರಿ. ಪಿರ್ಯಾದಿ ನೀಡುವ ಮುಂಚೆ ಆರೋಪಿತರು ಮರಳು ಶೇಖರಣೆ ಮಾಡುವ ವಿಷಯ ನನ್ನ ಗಮನಕ್ಕೆ ಬಂದಿಲ್ಲ ಎಂದರೆ ಸರಿ. ನನ್ನ ಗಮನಕ್ಕೆ ಗ್ರಾಮಸ್ಥರು ಸಹ ಯಾವುದೇ ವಿಷಯ ಗಮನಕ್ಕೆ ತಂದಿರಲಿಲ್ಲ ಎಂದರೆ ಸರಿ. ತಹಶೀಲ್ದಾರ್ ರವರಿಂದ ವರದಿ ಬರುವವರೆಗೆ ನನಗೆ ಮರಳು ತೆಗೆಯುವ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿ. ಸ್ಥಳದಲ್ಲಿ ಮರಳು ತೆಗೆಯುವ ಯಾವುದೇ ವಸ್ತುಗಳು ಇರಲಿಲ್ಲ ಹಾಗೂ ಅವುಗಳನ್ನು ಜಪ್ತು ಮಾಡಿಲ್ಲ ಎಂದರೆ ಸರಿ. ಪಿರ್ಯಾದಿಯ ಜೊತೆಗೆ ಸ್ಥಳದಲ್ಲಿ ಹಳ್ಳ ಇದ್ದ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿ.

ಆರೋಪಿತರು ಮರಳು ತೆಗೆದು ಶೇಖರಣೆ ಮಾಡುವ ಬಗ್ಗೆ ನನಗೆ ಸ್ಥಳಕ್ಕೆ ಹೋದಾಗ ಯಾರು ಮಾಹಿತಿ ನೀಡಿಲ್ಲ ಎಂದರೆ ಸರಿ. ಮಳೆಯಾದಾಗ ಶೇಖರಣೆಯಾದ ಮರಳನ್ನು ಜನರು ಮನೆ ಕಟ್ಟಲು ತೆಗೆದುಕೊಂಡು ಹೋಗುತ್ತಾರೆಂದರೆ ಸರಿ. ಪಿರ್ಯಾದಿಯಲ್ಲಿ ಯಾವ ಸರ್ವೆ ನಂಬರ್ ನಲ್ಲಿ ಮರಳು ಶೇಖರಣೆಯಾಗಿತ್ತು ಎಂದು ನಮೂದು ಇಲ್ಲ ಎಂದರೆ ಸರಿ. ರವಿಕುಮಾರ್ ರವರು ನೀಡಿರುವ ದೂರಿನಲ್ಲಿ ನಮೂದು ಮಾಡಲಾಗಿದ್ದ ವ್ಯಕ್ತಿಗಳ ಮೇಲೆ ನಾನು ಪಿರ್ಯಾದಿಯನ್ನು ನೀಡಿದ್ದೇನೆ. ನನಗೆ ಆರೋಪಿತರು ಮರಳು ತೆಗೆಯುವುದು ಹಾಗೂ ಶೇಖರಣೆ ಮಾಡುವುದು ನನ್ನ ಗಮನಕ್ಕೆ ಬಂದಿಲ್ಲ ಎಂದರೆ ಸರಿ.

ಮಹಜರ್ ಮಾಡುವಾಗ ಹಳ್ಳ ಯಾವ ದಿಕ್ಕಿನಿಂದ ಯಾವ ದಿಕ್ಕಿನ ಕಡೆ ಹೊಗುತ್ತದೆಂದು ಅದರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಹಳ್ಳದ ಆಳತೆ ಸಹ ನಮೂದು ಮಾಡಿಲ್ಲ ಎಂದರೆ ಸರಿ. ಮಹಜರ್ ನಲ್ಲಿ ಹಳ್ಳದಲ್ಲಿ ಮರಳು ಶೇಖರಣೆ ಆಗಿತ್ತು ಎಂದು ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಹಳ್ಳದಲ್ಲಿ ಶೇಖರಣೆ ಆಗಿರಲಿಲ್ಲ ಹಳ್ಳದಿಂದ ಹೊರಗಡೆ ಶೇಖರಣೆ ಯಾಗಿತ್ತು ಎಂದು ನುಡಿಯುತ್ತಾರೆ. ಹಳ್ಳದಿಂದ ಮರಳು ತೆಗೆದು ಶೇಖರಣೆ ಮಾಡಿದ ಸ್ಥಳದ ಚಕ್ಕುಬಂದಿ ಬರೆದಿಲ್ಲ ಎಂದರೆ ಸರಿ. ಮರಳು ತೆಗೆದ ಜಾಗದ ಚಕ್ಕುಬಂದಿ ಮತ್ತು ಮರಳು ಶೇಖರಣೆಯಾದ ಜಾಗದ ಚಕ್ಕುಬಂದಿ ಮಹಜರ್ ನಲ್ಲಿ ನಮೂದು ಇಲ್ಲ ಎಂದರೆ ಸರಿ. ಅಕ್ಕಪಕ್ಕದ ಜಮೀನಿನ ಜನರ ಸಹಿ ಮಹಜರ್ ನಲ್ಲಿ ಪಡೆದಿಲ್ಲ ಎಂದರೆ ಸರಿ. ಮುಂದುವರಿದು ಸಾಕ್ಷಿ ಅಲ್ಲಿ ಯಾರು ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ಹೇಳಿದ ಹಾಗೆ ಯಾವುದೇ ಹಳ್ಳ ಸ್ಥಳದಲ್ಲಿ ಇರಲಿಲ್ಲ, ಮರಳು ಸಹ ಇರಲಿಲ್ಲ ಎಂದರೆ ಸರಿಯಲ್ಲ.

ರವಿಕುಮಾರ್ ಆರ್ ಟಿ ಐ ಕಾರ್ಯಕರ್ತ ಆದ ಕಾರಣ ತಹಶೀಲ್ದಾರ್ ಅವರ ಮಾತಿಗೆ ಮಣಿದು ಆರೋಪಿತರ ಬಗ್ಗೆ ಸುಳ್ಳು ವರದಿ ನೀಡಿದ್ದಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಸರ್ವೆ ನಂಬರ್ ನಮೂದು ಇಲ್ಲ ಎಂದರೆ ಸರಿ. ಸ್ಥಳದಲ್ಲಿ ಮಹಜರ್ ಮಾಡಿಲ್ಲ, ಅಲ್ಲಿ ಯಾವುದೇ ಮರಳು ಶೇಖರಣೆಯಾಗಿರಲಿಲ್ಲ ಎಂದರೆ ಸರಿಯಲ್ಲ. ಬೇರೆ ಸ್ಥಳದಲ್ಲಿನ ಮರಳನ್ನು ಪೊಟೋ ತೆಗೆದು ಹಾಕಿದ್ದೇವೆಂದರೆ ಸರಿಯಲ್ಲ.

ದಿಃ06.06.2017 ರಂದು ಮರಳನ್ನು ಪೋಲೀಸ್ ಠಾಣೆಗೆ ಟ್ರಾಕ್ಟರ್ ನಲ್ಲಿ ತೆಗೆದುಕೊಂಡು ಹೋದೆವು. ಟ್ರಾಕ್ಟರ್ ನಂಬರ್ ಗೊತ್ತಿರುವುದಿಲ್ಲ. ಠಾಣೆಯ ಮಹಜರ್ ನಲ್ಲಿ

ಟ್ರಾಕ್ಟರ್ ನಂಬರ್ ನಮೂದು ಇಲ್ಲ ಎಂದರೆ ಸರಿ. ಸ್ದಳದಲ್ಲಿ ಮರಳು ಎಷ್ಟು ಇತ್ತು ಎಂದು ಸಹ ನಮೂದು ಇಲ್ಲ ಎಂದರೆ ಸರಿ. ಮರಳು ಇದ್ದ ಸ್ದಳದ ಚಕ್ಕುಬಂದಿ ಸಹ ನಮೂದು ಮಾಡಿಲ್ಲ ಎಂದರೆ ಸರಿ. ಠಾಣಾ ಮಹಜರ್ ಗೆ ಕೇವಲ ಸಹಿ ಹಾಕಿದ್ದೇನೆ,ಅದನ್ನು ಓದಿ ಹೇಳಿಲ್ಲ ಎಂದರೆ ಸರಿ. ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಆರೋಪಿತರ ವಿರುದ್ದ ನಾನು, ತಹಶೀಲ್ದಾರ್ ಹಾಗೂ ಸದರಿ ರವಿಕುಮಾರ್ ರವರು ಹೊಂಚು ಹಾಕಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ